# ಮೂರನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಮೈಸೂರು.

## Spl.C.78/2019

**P.W.-04**
**C.W.-04**

| | | |
|---|---|---|
| ಹೆಸರು | : | T.Ramesh Babu |
| ಗಂಡನ ಹೆಸರು | : | Late.Thimmegowda |
| ವಯಸ್ಸು | : | 54 ವರ್ಷ |
| ಉದ್ಯೋಗ | : | Tahasildar, |
| ವಾಸಸ್ಥಳ | : | Mysuru |

**ದಿನಾಂಕಃ20.07.2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ವಿಶೇಷ ಸರ್ಕಾರಿ ಅಭಿಯೋಜಕರಿಂದ ಃ –**

1. ನಾನು ದಿಃ25.07.2016 ರಿಂದ ದಿಃ06.01.2020 ರವರೆಗೆ ನಾನು ಮೈಸೂರು ತಾಲ್ಲೂಕು ತಹಸೀಲ್ದಾರನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ನ್ಯಾಯಾಲಯದ ಮುಂದಿರುವ ಆರೋಪಿ ನನಗೆ ಗೊತ್ತು. ದಿಃ14.07.2017 ರಂದು ನಾನು ಸಂಜೆ 7.00 ಗಂಟೆಗೆ ನನ್ನ ಚೇಂಬರಿನಲ್ಲಿ ಇದ್ದಾಗ, ಎಸಿಬಿ ಪೊಲೀಸರು ನಮ್ಮ ತಾಲ್ಲೂಕು ಕಛೇರಿಯ ಭೂಮಿ ಕೇಂದ್ರಕ್ಕೆ ಹೇಳಿ ಕಳುಹಿಸಿದರು. ಅದರಂತೆ ನಾನು ಆ ರೂಂ ನಂ.8, ಭೂಮಿ ಕೇಂದ್ರಕ್ಕೆ ಹೋದೆ. ಅಲ್ಲಿ ಎಸಿಬಿ ಪೊಲೀಸರು ಆರೋಪಿ ನಾಗೇಶ್ ಕುಮಾರನನ್ನು ಹಿಡಿದುಕೊಂಡಿದ್ದರು. ವಿಚಾರಸಿದಾಗ ಅವರು ಹಣ ಪಡೆದಿದ್ದಾರೆ ಎಂದು ಹೇಳಿದರು. ಕೆಸರೇ ಗ್ರಾಮದ ಸರ್ವೇ ನಂ. 610/4 ಮತ್ತು 610/6 ರಲ್ಲಿ ಒಟ್ಟು 1 ಎಕರೆ 30 ಗುಂಟೆ ಜಮೀನಿನ ಭೂಪರಿವರ್ತನೆಗಾಗಿ ಆ ಜಮೀನಿನ ಮಾಲೀಕರಾದ ಮೈಸೂರಿನ ಕಾರ್ಮೆಲ್ ಕಾನ್ವೆಂಟಿನ ಸಿಸ್ಟರ್ ತೆರೆಸಾರವರು ಅರ್ಜಿಯನ್ನು ನೀಡಿದ್ದರು. ಸಂಬಂಧಪಟ್ಟ ಕಡತ ಆರೋಪಿಯ ಬಳಿಯಲ್ಲಿ ಇತ್ತು. ನಾನು ಆ ರೂಮಿಗೆ ಹೋದಾಗ ಎಸಿಬಿ ಪೊಲೀಸರು ಆರೋಪಿಯನ್ನು ಹಿಡಿದುಕೊಂಡಿದ್ದರು. ಟ್ರಾಪ್ ನಡವಳಿಕೆಗಳನ್ನು ಮಾಡುತ್ತಿದ್ದರು. ಮೇಲೆ ಹೇಳಿದ ಕೆಸರೇ ಗ್ರಾಮದ ಸರ್ವೇ ನಂ. 610/4 ಮತ್ತು 610/6 ರ 1 ಎಕರೆ 30 ಗುಂಟೆ ಜಮೀನಿನ ಭೂಪರಿವರ್ತನೆಯ ದಾಖಲಾತಿಗಳನ್ನು

ಕೊಡುವಂತೆ ಎಸಿಬಿ ಪೊಲೀಸರು ಕೇಳಿದರು. ಅದರಂತೆ ನಾನು ಸದರಿ ಭೂ ಪರಿವರ್ತನೆಗೆ ಸಂಬಂಧಪಟ್ಟ 32 ದಾಖಲಾತಿಗಳನ್ನು ತೆಗೆದು ಅವುಗಳನ್ನು ಜೆರಾಕ್ಸ್ ಮಾಡಿಸಿ, ದೃಡೀಕರಿಸಿ, ಎಸಿಬಿ ಪೊಲೀಸರಿಗೆ ನೀಡಿರುತ್ತೇನೆ. ಸದರಿ ದಾಖಲಾತಿಗಳನ್ನು ನಾನು ನೋಡುತ್ತಿದ್ದೇನೆ, ಅವುಗಳನ್ನು ನಾನು ದೃಡೀಕರಿಸಿ ಸಹಿ ಹಾಕಿರುತ್ತೇನೆ. ಆ ದಾಖಲಾತಿಗಳನ್ನು ಪು.ಸಂ.160 ರಿಂದ 250 ರವರೆಗೆ ಇದ್ದು, ಅವುಗಳನ್ನು ಈಗಾಗಲೇ ಒಟ್ಟಾಗಿ ನಿಪಿ-14 ಎಂದು ಗುರುತು ಪಡಿಸಲಾಗಿದೆ. ಎಸಿಬಿ ಪೊಲೀಸರ ಮುಂದೆ ಆರೋಪಿ ಲಿಖಿತ ಸಮಾಜಯಿಷಿಯನ್ನು ಬರೆದುಕೊಟ್ಟಿರುತ್ತಾರೆ. ಅದನ್ನು ನಾನೀಗ ನೋಡುತ್ತಿದ್ದೇನೆ, ಸದರಿ ಸಮಾಜಯಿಷಿಯನ್ನು ಈಗಾಗಲೇ ನಿಪಿ-16 ಎಂದು ಗುರುತು ಪಡಿಸಲಾಗಿದೆ. ನನ್ನಿಂದ ಒಟ್ಟು ದೃಡೀಕೃತ ದಾಖಲಾತಿಗಳನ್ನು ಎಸಿಬಿ ಪೊಲೀಸರು ಪಡೆದ ನಂತರ, ಅಸಲು ದಾಖಲಾತಿಗಳನ್ನು ನನಗೆ ಹಿಂತಿರುಗಿಸಿರುವ ಬಗ್ಗೆ ಸ್ವೀಕೃತಿ ಪತ್ರವನ್ನು ನಾನು ನೀಡಿರುತ್ತೇನೆ. ಅದನ್ನು ನಾನೀಗ ನೋಡುತ್ತಿದ್ದೇನೆ, ಸದರಿ ಸ್ವೀಕೃತಿ ಪತ್ರವನ್ನು ನಿಪಿ-19 ಎಂತಲೂ, ಅದರಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ-19(ಎ) ಎಂದು ಗುರುತು ಪಡಿಸಿಕೊಳ್ಳಲಾಯಿತು.

2. ನಂತರ ಆರೋಪಿಯನ್ನು ದಸ್ತಗಿರಿ ಮಾಡಿದ್ದು, ಆ ನಡವಳಿಕೆಯ ಬಾಬು ನನಗೆ ದಸ್ತಗಿರಿ ತಿಳುವಳಿಕೆ ಪತ್ರವನ್ನು ನೀಡಿರುತ್ತಾರೆ, ಅದನ್ನು ನಾನೀಗ ನೋಡುತ್ತಿದ್ದೇನೆ, ಅದರ ಮೇಲೆ ನನ್ನ ಸಹಿ ಇರುತ್ತದೆ, ಸದರಿ ದಾಖಲಾತಿಯನ್ನು ನಿಪಿ-20 ಎಂತಲೂ, ಅದರಮೇಲೆ ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ-20(ಎ) ಎಂದು ಗುರುತು ಪಡಿಸಿಕೊಳ್ಳಲಾಯಿತು. ಟ್ರಾಪ್ ಮಹಜರಿಗೆ ನಾನು ಸಹಿ ಹಾಕಿರುತ್ತೇನೆ. ನಿಪಿ-15 ರ ಮೇಲೆ ನನ್ನ ಸಹಿ ಇರುತ್ತದೆ, ಸಾಕ್ಷಿ ಗುರುತಿಸಿದ ತನ್ನ ಸಹಿಯನ್ನು ನಿಪಿ-15(ಡಿ) ಎಂದು ಗುರುತು ಪಡಿಸಿಕೊಳ್ಳಲಾಯಿತು.

3. ಟ್ರಾಪ್ ಮಹಜರ್ ಕಾಲಕ್ಕೆ ದೂರುದಾರ ರೆಕಾರ್ಡ್ ಮಾಡಿಕೊಂಡಿದ್ದ ದೂರುದಾರ ಮತ್ತು ಆರೋಪಿಯ ನಡುವೆ ನಡೆದಂತಹ ಸಂಭಾಷಣೆಯನ್ನು ನನಗೆ ಕೇಳಿಸಿದರು. ಅದರಲ್ಲಿದ್ದ ಆರೋಪಿಯ ಧ್ವನಿಯನ್ನು ನಾನು ಗುರುತಿಸಿದೆ. ಎಸಿಬಿ ಪೊಲೀಸರು ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ.

**ಪಾಟೀಸವಾಲುಃ- ಆರೋಪಿ ಪರ ವಕೀಲರಿಂದಃ-**

4. ಎಸಿಬಿ ಪೊಲೀಸರು ನನ್ನನ್ನು ದಿಃ14.07.2017 ರಂದು ದಿಃ15.07.2017 ರಂದು ಕರೆಯಿಸಿದ್ದರು. ನನಗೆ ಒಬ್ಬರ ಧ್ವನಿಯನ್ನು ಗುರುತಿಸುವಂತಹ ತರಬೇತಿ ಆಗಿರುವುದಿಲ್ಲ. ನನ್ನ ಕೈಕೆಳಗೆ ನಾಲ್ಕು ಜನ ಉಪ-ತಹಸೀಲ್ದಾರರು ಕೆಲಸ ಮಾಡುತ್ತಾರೆ. ನಾಲ್ಕು ಜನ ಕಂದಾಯ ನಿರೀಕ್ಷಕರು ಕೆಲಸ ಮಾಡುತ್ತಿದ್ದರು. ಕಂದಾಯ ನಿರೀಕ್ಷಕರ ಕೈಕೆಳಗೆ ಗ್ರಾಮ ಲೆಕ್ಕಿಗರು ಇರುತ್ತಾರೆ ಎನ್ನುವುದು ಸರಿ. ಗ್ರಾಮ ಲೆಕ್ಕಿಗರೊಂದಿಗೆ ನನಗೆ ಅಪರೂಪಕ್ಕೊಮ್ಮೆ ಸಂಭಾಷಣೆ ನಡೆಯುತ್ತದೆ ಎನ್ನುವುದು ಸರಿ. ನನ್ನ ವ್ಯಾಪ್ತಿಯಲ್ಲಿ ಒಟ್ಟು 49 ಜನ ಗ್ರಾಮ ಲೆಕ್ಕಿಗರು ಕೆಲಸ ಮಾಡುತ್ತಿದ್ದರು. ಆರೋಪಿಯ ಧ್ವನಿ ಗುರುತಿಸಲು ನನ್ನನ್ನು ಕರೆದ ಹಿಂದಿನ ಎಷ್ಟು ದಿನಗಳ ಮುಂಚೆ ಆರೋಪಿಯನ್ನು ಭೇಟಿ ಮಾಡಿದ್ದೆ ಎನ್ನುವುದು ನನಗೀಗ ನೆನಪಿಲ್ಲ. ನೇರವಾಗಿ ಮಾತನಾಡುವಾಗ ಬರುವ ಧ್ವನಿಗೂ ಮತ್ತು ರೆಕಾರ್ಡ್ ಮಾಡಿ ಕೇಳಿದಾಗ ಬರುವ ಧ್ವನಿಗೂ ಸ್ವಲ್ಪ ಬದಲಾವಣೆ ಇರುತ್ತದೆ ಎಂದು ಮಾಡಿದ ಸಲಹೆಗೆ ಸಾಕ್ಷಿ ಆ ತಾಂತ್ರಿಕತೆಯ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ.

5. ನಾನು ಸಹಿ ಹಾಕಿರುವ ಮಹಜರ್ ವಿರುದ್ಧ ನ್ಯಾಯಾಲಯದಲ್ಲಿ ಸಾಕ್ಷ ನುಡಿದರೆ, ನನ್ನ ವಿರುದ್ಧ ಇಲಾಖಾ ವಿಚಾರಣೆಯನ್ನು ಕೈಗೊಳ್ಳಬಹುದಾಗಿರುತ್ತದೆ ಎನ್ನುವುದು ಸರಿ. ಆರೋಪಿಯ ಧ್ವನಿ ಗುರುತಿಸಲು ನನ್ನನ್ನು ಕರೆದ ಹಿಂದಿನ ಎಷ್ಟು ದಿನಗಳ ಮುಂಚೆ ಆರೋಪಿಯ ಧ್ವನಿಯನ್ನು ಕೇಳಿದ್ದೆ ಎನ್ನುವುದು ನನಗೀಗ ನೆನಪಿಲ್ಲ. ನಾನು ರೆಕಾರ್ಡಿಂಗನ್ನು ಕೇಳಿ ಧ್ವನಿಯನ್ನು ಆರೋಪಿಯದ್ದೆ ಎಂದು ಹೇಳಿರುತ್ತೇನೆ. ನಾನು ಆರೋಪಿಯ ಧ್ವನಿಯನ್ನೇ ಕೇಳಿರಲಿಲ್ಲ ಎನ್ನುವುದು ಸರಿಯಲ್ಲ.

6. ಸರ್ವೇ ನಂ.610/4 ಮತ್ತು 610/6 ಸ್ವತ್ತು ಸೊಸೈಟಿ ಆಫ್ ಕಾರ್ಮಲೈಟ್ ಟೆರಿಷಿಯನ್ ಸಿಸ್ಟರ್ಸ್ ಇನ್ ಇಂಡಿಯಾ, ಮೈಸೂರು ಪರವಾಗಿ ತೆರೆಸಾರವರು ನೋಡಿಕೊಳ್ಳುತ್ತಿದ್ದರು ಎನ್ನುವುದು ಸರಿ. ಆ ಸ್ವತ್ತು ಸೊಸೈಟಿಗೆ ಸೇರಿದ್ದಾಗಿದ್ದರಿಂದ Sec.109 Land Reforms Act ನ ಅಡಿಯಲ್ಲಿ ಒಬ್ಬ ವ್ಯಕ್ತಿಯ ಹೆಸರಿಗೆ ಭೂ-ಪರಿವರ್ತನೆ ಮಾಡಲು ಬರುವುದಿಲ್ಲ ಎನ್ನುವುದು ಸರಿ. ನಾನು ಎಸಿಬಿ ಪೊಲೀಸರಿಗೆ ನೀಡಿದ ದಾಖಲಾತಿಗಳಲ್ಲಿ ಪು.ಸಂ.167 ರಲ್ಲಿ ಸಿಸ್ಟರ್ಸ್ ತೆರೆಸಾ ಬಿ.ರವರು ಭೂಪರಿವರ್ತನೆಗಾಗಿ ಅರ್ಜಿ ಸಲ್ಲಿಸಿರುತ್ತಾರೆ ಎನ್ನುವುದು ಸರಿ. ಪು.ಸಂ.166 ರಲ್ಲಿ ದಿಃ21.06.2017 ರಂದು ಜಿಲ್ಲಾಧಿಕಾರಿಗಳ ಪರವಾಗಿ ನಮ್ಮ ಕಛೇರಿಗೆ ವರದಿ ಕೇಳಿ ಪತ್ರಿಸಿರುತ್ತಾರೆ

ಎನ್ನುವುದು ಸರಿ. ಪ್ರ.ಸಂ.165 ರ ಪ್ರಕಾರ ಉಪ-ತಹಸೀಲ್ದಾರರ ಮೂಲಕ ಕಂದಾಯ ನಿರೀಕ್ಷಕರಿಗೆ ದಾಖಲಾತಿಗಳನ್ನು ಕಳುಹಿಸಿ ವರದಿಯನ್ನು ನೀಡಬೇಕೆಂದು ಕೇಳಲಾಗಿದೆ ಎನ್ನುವುದು ಸರಿ. ಈ ದಾಖಲಾತಿಯಂತೆ ಗ್ರಾಮ ಲೆಕ್ಕಾಧಿಕಾರಿಯಿಂದ ಯಾವುದೇ ವರದಿಯನ್ನು ಕೇಳಿರುವುದಿಲ್ಲ ಎನ್ನುವುದು ಸರಿ. ಪ್ರ.ಸಂ.165 ರ ದಾಖಲಾತಿಯ ಎಡಭಾಗದಲ್ಲಿ ಕಂದಾಯ ನಿರೀಕ್ಷಕರು Received ಎಂದು ಸಹಿ ಹಾಕಿರುತ್ತಾರೆ ಎನ್ನುವುದು ಸರಿ. ಭೂಮಿ ಕೇಂದ್ರದ ಕೊಠಡಿ ಸಂಖ್ಯೆ 8 ರಲ್ಲಿ ಆರೋಪಿಯ ಕಛೇರಿ ಇರುವುದಿಲ್ಲ ಎನ್ನುವುದು ಸರಿ. ಆರೋಪಿಯ ಕಛೇರಿ ಇರುವುದು ಸಿದ್ದಲಿಂಗಪುರದಲ್ಲಿ ಎನ್ನುವುದು ಸರಿ. ಸಿದ್ದಲಿಂಗಪುರದ ಕಂದಾಯ ನಿರೀಕ್ಷಕರ ಕಛೇರಿ ನಮ್ಮ ಕಛೇರಿಯ ಹಿಂಬಾಗದಲ್ಲಿ ತಾತ್ಕಲಿಕವಾಗಿ ಇತ್ತು. ನಾನು ದೃಡೀಕರಿಸಿ ಕೊಟ್ಟ ದಾಖಲಾತಿಗಳನ್ನು ಕಂದಾಯ ನಿರೀಕ್ಷಕರ ಕಛೇರಿಯಿಂದ ತರಿಸಿ ದೃಡೀಕರಿಸಿ ಕೊಟ್ಟಿರುತ್ತೇನೆ ಎನ್ನುವುದು ಸರಿಯಲ್ಲ.

7. ಮಹಜರಿನಲ್ಲಿ ಬರೆದ ವಿಷಯಕ್ಕೆ ವಿರುದ್ಧವಾಗಿ ಹೇಳಿದರೆ ನನಗೆ ತೊಂದರೆಯಾಗುತ್ತದೆ ಎನ್ನುವ ಕಾರಣಕ್ಕಾಗಿ ಸುಳ್ಳು ಸಾಕ್ಷವನ್ನು ನುಡಿಯುತ್ತಿದ್ದೇನೆ ಎನ್ನುವುದು ಸರಿಯಲ್ಲ. ಆರೋಪಿಯ ಧ್ವನಿಯನ್ನು ನಾನು ಗುರುತಿಸಿರುವುದಿಲ್ಲ ಎನ್ನುವುದು ಸರಿಯಲ್ಲ. ನಿಪಿ-14 ರಂತೆ ನಾನು ದೃಡೀಕರಿಸಿ ಕೊಟ್ಟಿರುವ ದಾಖಲಾತಿಗಳನ್ನು ಆರೋಪಿ ಕಛೇರಿಯಿಂದ ಪಡೆದಿರುವುದಿಲ್ಲ ಎನ್ನುವು ಸರಿಯಲ್ಲ. ನನ್ನ ಅಧಿಕಾರದ ಅವದಿಯಲ್ಲಿ ಕಂದಾಯ ನಿರೀಕ್ಷಕರಿಗೆ ಮೆಮೊ ನೀಡಿ, ಅವರಿಗೆ ಕಳುಹಿಸಿದ್ದ ದಾಖಲಾತಿಗಳು ಆರೋಪಿಯ ವಶಕ್ಕೆ ಹೇಗೆ ಬಂದವು ಎಂದು ಕೇಳಿರುವುದಿಲ್ಲ. ಆ ದಾಖಲಾತಿಗಳು ಆರೋಪಿಯ ವಶದಲ್ಲಿ ಇಲ್ಲದೇ ಇದುದರಿಂದ, ನಾನು ಆ ರೀತಿ ಕೇಳಿರುವುದಿಲ್ಲ ಎನ್ನುವುದು ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಎ ಒ

3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಮೈಸೂರು.